ಕರ್ನಾಟಕ ಸರ್ಕಾರ
# ಮೀನುಗಾರಿಕೆ ನಿರ್ದೇಶನಾಲಯ
3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ|| ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 560 001
ದೂ : 080 - 2286 4681/4604 ಫ್ಯಾಕ್ಸ್ : 080 - 2286 4619 ಇಮೇಲ್ : dof-blr-ka@nic.in

**ಹಿಂಬರಹ ಸಂಖ್ಯೆ: DOF-TECHOALL2/94/2020, E-360662. ದಿನಾಂಕ: 21/06/2022.**

ಸರ್ಕಾರದ ಆದೇಶ ಸಂಖ್ಯೆ: ಪಸಂಮೀ ಇ-70 ಮೀಇಇ 2022, ದಿನಾಂಕ: 18/06/2022ನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸುತ್ತಾ, ಸರ್ಕಾರದ ಆದೇಶದಂತೆ ಕ್ರಮವಹಿಸಲು ತಿಳಿಸಲಾಗಿದೆ.

ಅಡಕ:ಮೇಲಿನಂತೆ,

ಸಹಿ/-

ಮೀನುಗಾರಿಕೆ ನಿರ್ದೇಶಕರು.

ಗೆ:

ಎಲ್ಲಾ ಮೀನುಗಾರಿಕೆ ಜಂಟಿ ನಿರ್ದೇಶಕರುಗಳು,

ಎಲ್ಲಾ ಜಿಲ್ಲಾ ಮಟ್ಟದ ಮೀನುಗಾರಿಕೆ ಅಧಿಕಾರಿಗಳಿಗೆ,

ಎಲ್ಲಾ ತಾಲ್ಲೂಕು ಮಟ್ಟದ ಮೀನುಗಾರಿಕೆ ಅಧಿಕಾರಿಗಳಿಗೆ,

ಪ್ರತಿಯನ್ನು: ಕೇಂದ್ರ ಕಛೇರಿಯ ಹಗುಪ(1) ಸಂಕಲನಕ್ಕೆ ಮಾಹಿತಿಗಾಗಿ.

ಪ್ರತಿಯನ್ನು: ಕೇಂದ್ರ ಕಛೇರಿಯ ಹಗುಪ (2) ದಾಸ್ತಾನು ಕಡತಕ್ಕೆ.

ಪ್ರತಿಯನ್ನು: ಮೀನುಗಾರಿಕೆ ಸಹಾಯವಾಣಿ ರವರಿಗೆ ಮಾಹಿತಿಗಾಗಿ.

ಮೀನುಗಾರಿಕೆ ನಿರ್ದೇಶಕರ ಪರವಾಗಿ

21/6/22

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಮೀನುಗಾರಿಕೆ ಇಲಾಖೆ ವ್ಯಾಪ್ತಿಯ ಕೆರೆಗಳ ಮೀನು ಪಾಶುವಾರು ಹಕ್ಕನ್ನು ಇ-ಟೆಂಡರ್ ಮೂಲಕ ವಿಲೇವಾರಿ ಮಾಡುವಾಗ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಮೀನುಗಾರರಿಗೆ ಮೀಸಲಾತಿ ಕಲ್ಪಿಸುವ ಕುರಿತು.

ಓದಲಾಗಿದೆ:- (1) ನಿರ್ದೇಶಕರು, ಎಸ್.ಸಿ.ಪಿ./ಟಿ.ಎಸ್.ಪಿ. ಕೋಶ, ಬೆಂಗಳೂರು ಇವರ ಪತ್ರ ಸಂಖ್ಯೆ: ಸಕ ಇ/SCP-TSP ಕೋಶ/ ಸಿ.ಆರ್.-05/2020-21, ದಿನಾಂಕ: 24-09-2020

(2) ಮೀನುಗಾರಿಕೆ ನಿರ್ದೇಶಕರ ಏಕ ಕಡತ ಪತ್ರ ಸಂಖ್ಯೆ: DOF-TECHOALL (2)/94/2020, ದಿನಾಂಕ: 10-04-2021.

(3) ದಿನಾಂಕ:25.04.2022 ರಂದು ನಡೆದ ಸಭೆಯ ನಡವಳಿ.

******

**ಪ್ರಸ್ತಾವನೆ:**

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ನಿರ್ದೇಶಕರು, ಎಸ್.ಸಿ.ಪಿ./ಟಿ.ಎಸ್.ಪಿ. ಕೋಶ, ಇವರ ಪತ್ರದಲ್ಲಿ ಮೀನುಗಾರಿಕೆ ಇಲಾಖೆ ವ್ಯಾಪ್ತಿಯ ಕೆರೆಗಳ ಮೀನು ಪಾಶುವಾರು ಹಕ್ಕನ್ನು ಇ-ಟೆಂಡರ್ ಮೂಲಕ ವಿಲೇವಾರಿ ಮಾಡುವಾಗ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಮೀನುಗಾರರಿಗೆ ನಿಯಮಾನುಸಾರ ಕನಿಷ್ಟ ಶೇ.24.10 ರಷ್ಟು ಮೀಸಲಾತಿ ಕಲ್ಪಿಸಲು ಸೂಚಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ನಿರ್ದೇಶಕರು, ಮೀನುಗಾರಿಕೆ ಇಲಾಖೆ ಇವರ ಪತ್ರದಲ್ಲಿ, ಇಲಾಖಾ ವ್ಯಾಪ್ತಿಯ ಕೆರೆಗಳ ಮೀನು ಪಾಶುವಾರು ಹಕ್ಕನ್ನು ನೇರ ಗುತ್ತಿಗೆ ಮುಖಾಂತರ ಮೀನುಗಾರರ ಸಹಕಾರ ಸಂಘಗಳಿಗೆ ವಿಲೇವಾರಿ ಮಾಡಿದ ನಂತರ ಉಳಿದ ಕೆರೆಗಳ ಮೀನು ಪಾಶುವಾರು ಹಕ್ಕನ್ನು ಇ-ಟೆಂಡರ್ ಮೂಲಕ ವಿಲೇವಾರಿ ಮಾಡುವಾಗ ಪರಿಶಿಷ್ಟ ಜಾತಿ ಮೀನುಗಾರರಿಗೆ ಶೇ.17.15 ಹಾಗೂ ಪರಿಶಿಷ್ಟ ಪಂಗಡದ ಮೀನುಗಾರರಿಗೆ ಶೇ.6.95 ರಷ್ಟು ಮೀಸಲಾತಿ ಕಲ್ಪಿಸಲು ಜಿಲ್ಲಾ ಮಟ್ಟದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಅಧಿಕಾರಿಯುಕ್ತ ಸಮಿತಿಯನ್ನು ರಚಿಸುವಂತೆ ಕೋರಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ನಡವಳಿಯಲ್ಲಿ, ಇಲಾಖಾ ವ್ಯಾಪ್ತಿಯ ಕೆರೆಗಳ ಮೀನು ಪಾಶುವಾರು ಹಕ್ಕನ್ನು ನೇರ ಗುತ್ತಿಗೆ ಮುಖಾಂತರ ಮೀನುಗಾರರ ಸಹಕಾರ ಸಂಘಗಳಿಗೆ ವಿಲೇವಾರಿ ಮಾಡಿದ ನಂತರ ಉಳಿದ ಕೆರೆಗಳ ಮೀನು ಪಾಶುವಾರು ಹಕ್ಕನ್ನು ಇ-ಟೆಂಡರ್ ಮೂಲಕ ವಿಲೇವಾರಿ ಮಾಡುವಾಗ ಪರಿಶಿಷ್ಟ ಜಾತಿ ಮೀನುಗಾರರಿಗೆ ಶೇ.17.15 ಹಾಗೂ ಪರಿಶಿಷ್ಟ ಪಂಗಡದ ಮೀನುಗಾರರಿಗೆ ಶೇ.6.95 ರಷ್ಟು ಮೀಸಲಾತಿ ಕಲ್ಪಿಸಲು ಜಿಲ್ಲಾ ಮಟ್ಟದಲ್ಲಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಅಧಿಕಾರಿಯುಕ್ತ ಸಮಿತಿಯನ್ನು ರಚಿಸಲು ನಿರ್ಣಯಿಸಲಾಗಿದೆ.

Kamakshi



Generated from eOffice by LAKSHMI B, DOF-SDA(LB), SECOND DIVISION ASSISTANT, DIRECTORATE OF FISHERIES on 21/06/2022 04:53 PM

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಹಾಗೂ ದಿನಾಂಕ: 25-04-2022 ರಂದು ಸರ್ಕಾರದ ಕಾರ್ಯದರ್ಶಿರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನಿರ್ಣಯಿಸಲಾದಂತೆ ಮೀನುಗಾರಿಕೆ ಇಲಾಖಾ ವ್ಯಾಪ್ತಿಯ ಕೆರೆಗಳ ಮೀನು ಪಾಶುವಾರು ಹಕ್ಕನ್ನು ಇ-ಟೆಂಡರ್ ಮೂಲಕ ವಿಲೇವಾರಿ ಮಾಡುವಾಗ ಪರಿಶಿಷ್ಟ ಜಾತಿ ಮೀನುಗಾರರಿಗೆ ಶೇ.17.15 ಹಾಗೂ ಪರಿಶಿಷ್ಟ ಪಂಗಡದ ಮೀನುಗಾರರಿಗೆ ಶೇ.6.95 ರಷ್ಟು ಮೀಸಲಾತಿ ಕಲ್ಪಿಸಲು ಜಿಲ್ಲಾ ಮಟ್ಟದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಒಂದು ಅಧಿಕಾರಿಯುಕ್ತ ಸಮಿತಿಯನ್ನು ರಚಿಸಲು ಸರ್ಕಾರವು ತೀರ್ಮಾನಿಸಿ, ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಪಸಂಮೀ ಇ-70 ಮೀಇಇ 2022, ಬೆಂಗಳೂರು ದಿನಾಂಕ: 18-06-2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮೀನುಗಾರಿಕೆ ಇಲಾಖಾ ವ್ಯಾಪ್ತಿಯ ಕೆರೆಗಳ ಮೀನು ಪಾಶುವಾರು ಹಕ್ಕನ್ನು ನೇರ ಗುತ್ತಿಗೆ ಮುಖಾಂತರ ಮೀನುಗಾರರ ಸಹಕಾರ ಸಂಘಗಳಿಗೆ ವಿಲೇವಾರಿ ಮಾಡಿದ ನಂತರ ಉಳಿದ ಕೆರೆಗಳ ಮೀನು ಪಾಶುವಾರು ಹಕ್ಕನ್ನು ಇ-ಟೆಂಡರ್ ಮೂಲಕ ವಿಲೇವಾರಿ ಮಾಡುವಾಗ ಪರಿಶಿಷ್ಟ ಜಾತಿ ಮೀನುಗಾರರಿಗೆ ಶೇ.17.15 ಹಾಗೂ ಪರಿಶಿಷ್ಟ ಪಂಗಡದ ಮೀನುಗಾರರಿಗೆ ಶೇ.6.95 ರಷ್ಟು ಮೀಸಲಾತಿ ಕಲ್ಪಿಸಲು ಆಯಾ ಜಿಲ್ಲಾ ಮಟ್ಟದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಕೆಳಕಂಡ ಅಧಿಕಾರಿಯುಕ್ತ ಸಮಿತಿಯನ್ನು ರಚಿಸಲಾಗಿದೆ.

| ಕ್ರಮ ಸಂಖ್ಯೆ | ಪದನಾಮ | |
|---|---|---|
| 1) | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ | - ಅಧ್ಯಕ್ಷರು |
| 2) | ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ - | - ಸದಸ್ಯರು |
| 3) | ಜಿಲ್ಲಾ ಪರಿಶಿಷ್ಟ ವರ್ಗದ ಕಲ್ಯಾಣಾಧಿಕಾರಿ | - ಸದಸ್ಯರು |
| 4) | ಜಿಲ್ಲಾ ಮೀನುಗಾರಿಕೆ ಉಪ ನಿರ್ದೇಶಕರು | - ಸದಸ್ಯ ಕಾರ್ಯದರ್ಶಿ |

ಮೇಲ್ಕಂಡ ಸಮಿತಿಯು ಮೀಸಲಾತಿ ಕಲ್ಪಿಸುವ ಸಂದರ್ಭದಲ್ಲಿ ಈ ಆದೇಶದ **ಅನುಬಂಧ**ದಲ್ಲಿ ನಮೂದಿಸಿರುವ ಷರತ್ತು ಮತ್ತು ನಿಬಂಧನೆಗಳನ್ನು ಪಾಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Kamakshi U.A 18/6/2022
(ಕಾಮಾಕ್ಷಿ ಯು.ಎ.)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
TCK 18.6.2022 (ಮೀನುಗಾರಿಕೆ)

ಇವರಿಗೆ

1) ಪ್ರಧಾನ ಮಹಾಲೇಖಪಾಲರು (ಜಿ&ಎಸ್ಎಸ್ಎ)(ಇ&ಆರ್ಎಸ್ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.



Generated from eOffice by LAKSHMI B, DOF-SDA(LB), SECOND DIVISION ASSISTANT, DIRECTORATE OF FISHERIES on 21/06/2022 04:53 PM

**ಆದೇಶ ಸಂಖ್ಯೆ: ಪಸಂಮೀ ಇ-70 ಮೀಇಇ 2022, ಬೆಂಗಳೂರು ದಿನಾಂಕ: 18-06-2022ರ**

**ಅನುಬಂಧ**

**ಷರತ್ತು ಮತ್ತು ನಿಬಂಧನೆಗಳು**

1) ಅಧಿಕಾರಯುಕ್ತ ಸಮಿತಿಯು ಜಿಲ್ಲೆಯಲ್ಲಿ ಲಭ್ಯವಿರುವ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆ ಕಾರ್ಯನೀತಿ-2014 ರನ್ವಯ ನೇರ ಗುತ್ತಿಗೆ ಮುಖಾಂತರ ಅರ್ಹ ಮೀನುಗಾರರ ಸಹಕಾರ ಸಂಘಗಳಿಗೆ ವಿಲೇವಾರಿ ಮಾಡಿದ ನಂತರ. ಉಳಿದ 100 ಹೆಕ್ಟೇರ್‌ವರೆಗಿನ ಜಲವಿಸ್ತೀರ್ಣದ ಜಲಸಂಪನ್ಮೂಲಗಳ ಪೈಕಿ ಶೇ.24.10 ಜಲಸಂಪನ್ಮೂಲಗಳನ್ನು ಸಂಬಂಧಪಟ್ಟ ತಾಲ್ಲೂಕಿನಲ್ಲಿ ಎಸ್.ಸಿ./ಎಸ್.ಟಿ. ಸಮುದಾಯವು ಹೆಚ್ಚಾಗಿ ವಾಸಿಸುವ / ಕ್ರೋಢಿಕೃತವಾಗಿರುವ ಪ್ರದೇಶದಲ್ಲಿ ಬರುವ ಕೆರೆಗಳನ್ನು ಆ ಸಮುದಾಯದವರಿಗೆ ನೀಡುವುದು. ಆ ಭಾಗದಲ್ಲಿ ಕೆರೆಗಳು ಲಭ್ಯವಿಲ್ಲದಿದ್ದಲ್ಲಿ ಬೇರೆ ಭಾಗದಲ್ಲಿ ಅವಕಾಶ ಕಲ್ಪಿಸುವುದು.

2) ಆಯ್ಕೆಯಾದ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆ ಕಾರ್ಯನೀತಿ-2014 ರನ್ವಯ ತಾಲ್ಲೂಕು ಮಟ್ಟದ ಅಧಿಕಾರಿಗಳು ಜಲಸಂಪನ್ಮೂಲಗಳ ತಾಲ್ಲೂಕಿನಲ್ಲಿ ವಾಸವಿರುವ ಪರಿಶಿಷ್ಟ ಜಾತಿ (ಶೇ.17.15) / ಪರಿಶಿಷ್ಟ ಪಂಗಡದ (ಶೇ.6.95) ಜನಾಂಗದವರಿಗೆ ಸೀಮಿತವಾಗಿರಿಸಿ ವಿಲೇವಾರಿ ಮಾಡಲು ಕ್ರಮ ವಹಿಸುವುದು. ಒಂದು ವೇಳೆ ಜಲಸಂಪನ್ಮೂಲದ ತಾಲ್ಲೂಕಿನ ವ್ಯಾಪ್ತಿಯಲ್ಲಿನ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಮೀನುಗಾರರು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸದೇ ಇದ್ದಲ್ಲಿ, ಜಿಲ್ಲಾ ಮಟ್ಟದವರೆಗೆ ಅವಕಾಶ ಕಲ್ಪಿಸತಕ್ಕದ್ದು.

3) ತಾಲ್ಲೂಕಿನಲ್ಲಿ ಲಭ್ಯವಿರುವ 100 ಹೆಕ್ಟೇರ್ ಜಲವಿಸ್ತೀರ್ಣದವರೆಗಿನ ಕೆರೆಗಳ ಒಟ್ಟು ಜಲವಿಸ್ತೀರ್ಣದ ಕನಿಷ್ಠ ಶೇ.24.10ರಷ್ಟು ಪ್ರಮಾಣವನ್ನು ಕಾಪಾಡಿಕೊಳ್ಳುವುದು.

4) ಇ-ಟೆಂಡರ್ ಪ್ರಕ್ರಿಯೆ ನಡೆಸುವ ಫಸಲಿ ವರ್ಷದಲ್ಲಿ ಇ-ಟೆಂಡರ್ ಗೆ ಲಭ್ಯವಿರುವ 100 ಹೆಕ್ಟೇರ್ ಜಲವಿಸ್ತೀರ್ಣದವರೆಗಿನ ಶೇ. 24.10 ರಷ್ಟು ವಿಸ್ತೀರ್ಣದ ಕೆರೆಗಳನ್ನು ಪಟ್ಟಿ ಮಾಡಿ ಅವುಗಳಲ್ಲಿ ಶೇ.17.15 ರಷ್ಟು ಕೆರೆಗಳನ್ನು ಪರಿಶಿಷ್ಟ ಜಾತಿ ಮತ್ತು ಶೇ. 6.95 ಕೆರೆಗಳನ್ನು ಪರಿಶಿಷ್ಟ ಪಂಗಡದವರಿಗೆ ಮೀಸಲಿರಿಸಲು ಅಧಿಕಾರಯುಕ್ತ ಸಮಿತಿಯು ನಿರ್ಧರಿಸತಕ್ಕದ್ದು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹರಾಜು ಪ್ರಕ್ರಿಯೆಗೆ ಮೀಸಲಿರಿಸಿ ಕೆರೆಗಳ ಇ-ಟೆಂಡರ್ ನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಫಲಾನುಭವಿಗಳು ಯಾರು ಭಾಗವಹಿಸದೇ ಇದ್ದಲ್ಲಿ ಅಂತಹ ಕೆರೆಗಳನ್ನು ಮತ್ತೊಮ್ಮೆ ಇ-ಟೆಂಡರ್ ಮಾಡಲು ಕ್ರಮ ಕೈಗೊಳ್ಳುವುದು. ಆದಾಗ್ಯೂ ಭಾಗವಹಿಸದೇ ಇದ್ದಲ್ಲಿ, ಅದೇ ಸಮುದಾಯದವರಿಗೆ ನಿಯಮಾನುಸಾರ ಪರವಾನಗಿ ನೀಡಲು ಕ್ರಮ ವಹಿಸುವುದು.

5) ಸದರಿ ಸಮಿತಿಯು ಮೀಸಲಾತಿ ಕಲ್ಪಿಸಲು ತಾಲ್ಲೂಕಿನಲ್ಲಿನ ಕೆರೆಗಳನ್ನು ಆಯ್ಕೆ ಮಾಡಲು ಎಸ್.ಸಿ./ಎಸ್.ಟಿ. ಸಮುದಾಯವು ಹೆಚ್ಚಾಗಿ ವಾಸಿಸುವ / ಕ್ರೋಢಿಕೃತವಾಗಿರುವ ಆಧಾರದ ಮೇಲೆ / ಲಾಟರಿ ಮೂಲಕ / Randomization ಮೂಲಕ ಆಯ್ಕೆ ಮಾಡುವುದು.

6) ಸದರಿ ಸಮಿತಿಯು ಕೆರೆಗಳಲ್ಲಿ ಮೀನು ಕೃಷಿ ಕೈಗೊಳ್ಳಲು ಸಾಕಾಗುವಷ್ಟು ನೀರು ಸಂಗ್ರಹವಾಗಿರುವುದನ್ನು ಖಚಿತಪಡಿಸಿಕೊಳ್ಳುವುದು.

7) ಸರ್ಕಾರದ ಆದೇಶ ಸಂ.ಪಸಂಮೀ/125/ಮೀಇಇ/2013 ದಿನಾಂಕ:21.02.2014ರ ಕಂಡಿಕೆ (2)ರಲ್ಲಿ ಸೇರ್ಪಡೆಗೊಳಿಸಲಾಗಿದೆ.

Kamakshi U A

(ಕಾಮಾಕ್ಷಿ ಯು.ಎ.) 18/6/2022

ಸರ್ಕಾರದ ಅಧೀನ ಕಾರ್ಯದರ್ಶಿ

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ

(ಮೀನುಗಾರಿಕೆ)

TCK 18.6.2022.



Generated from eOffice by LAKSHMI B, DOF-SDA(LB), SECOND DIVISION ASSISTANT, DIRECTORATE OF FISHERIES on 21/06/2022 04:53 PM

2) ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
4) ಜಿಲ್ಲಾ ಮಟ್ಟದ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ - ಮೀನುಗಾರಿಕೆ ನಿರ್ದೇಶಕರು ಮುಖಾಂತರ.
5) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
6) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
7) ನಿರ್ದೇಶಕರು, ಎಸ್.ಸಿ.ಪಿ./ಟಿ.ಎಸ್.ಪಿ. ಕೋಶ, ಬೆಂಗಳೂರು.
8) ಸಂಬಂಧಪಟ್ಟ ಎಲ್ಲಾ ಜಿಲ್ಲಾ ಮಟ್ಟದ ಸಮಾಜ ಕಲ್ಯಾಣಾಧಿಕಾರಿ / ಜಿಲ್ಲಾ ಪರಿಶಿಷ್ಟ ವರ್ಗದ ಕಲ್ಯಾಣಾಧಿಕಾರಿಗಳಿಗೆ - ಮೀನುಗಾರಿಕೆ ನಿರ್ದೇಶಕರ ಮುಖಾಂತರ.
9) ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ - ಮೀನುಗಾರಿಕೆ ನಿರ್ದೇಶಕರ ಮುಖಾಂತರ.
10) ಕಂಟ್ರೋಲ್ ರೂಮ್-ಕಂ-24x7 ಹೆಲ್ಪ್ ಲೈನ್ (ಸಹಾಯವಾಣಿ), ಮೀನುಗಾರಿಕೆ ಇಲಾಖೆ.
11) ಶಾಖಾ ರಕ್ಷಾ ಕಡತ / ಹೆಚ್ಚಿನ ಪ್ರತಿಗಳು / ಸಮನ್ವಯ-ಕಂಪೆಂಡಿಯಂ.

**ಪ್ರತಿಯನ್ನು**

1) ಮಾನ್ಯ ಮೀನುಗಾರಿಕೆ. ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಆಪ್ತ ಕಾರ್ಯದರ್ಶಿಗಳು. ವಿಧಾನಸೌಧ. ಬೆಂಗಳೂರು.
2) ಸರ್ಕಾರದ ಕಾರ್ಯದರ್ಶಿಗಳು / ಜಂಟಿ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರು, ಪಸಂಮೀ ಇಲಾಖೆ, ವಿಕಾಸಸೌಧ, ಬೆಂಗಳೂರು.



Generated from eOffice by LAKSHMI B, DOF-SDA(LB), SECOND DIVISION ASSISTANT, DIRECTORATE OF FISHERIES on 21/06/2022 04:53 PM